**ಕರ್ನಾಟಕ ಸರ್ಕಾರ**
**ಸಹಕಾರ ಚುನಾವಣಾ ಪ್ರಾಧಿಕಾರ**

ವಿಷಯ:– 2015ನೇ ಸಾಲಿನಲ್ಲಿ ಪದಾವಧಿ ಮುಗಿಯಲಿರುವ ಫೆಡರಲ್ ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಲಿಗಳಿಗೆ, ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆ ನಡೆಸಲು ಜಿಲ್ಲಾ ಚುನಾವಣಾಧಿಕಾರಿಗಳ ನೇಮಕ ಮಾಡುವ ಬಗ್ಗೆ.

ಉಲ್ಲೇಖ:– ಪ್ರಾಧಿಕಾರದ ಅಧಿಸೂಚನೆ **ಸಂಖ್ಯೆ: ಸಚುಪ್ರಾ/ಆಡಳಿತ/ಚುನಾವಣೆ/96/2014**
ದಿನಾಂಕ : 05.03.2015.

★★★★★

<u>ಪ್ರಸ್ತಾವನೆ:–</u>

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ (ಸಂಕ್ಷಿಪ್ತವಾಗಿ 'ಅಧಿನಿಯಮ') ಪ್ರಕರಣ 39–ಎ ಹಾಗೂ ಪ್ರಕರಣ 39–ಎಎ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ–26 ಹಾಗೂ 26ಎ ದ ಅವಕಾಶದಂತೆ ಯಾವುದೇ ಆಕಸ್ಮಿಕ ಖಾಲಿ ಸ್ಥಾನವನ್ನು ಒಳಗೊಂಡಂತೆ ಸಹಕಾರ ಸಂಘದ ಮಂಡಲಿಯ ಸದಸ್ಯರ ಪ್ರತಿಯೊಂದು ಸಾಮಾನ್ಯ ಚುನಾವಣೆಯನ್ನು ಮತ್ತು ಪದಾಧಿಕಾರಿಗಳ ಚುನಾವಣೆಯನ್ನು ಸಹಕಾರ ಚುನಾವಣಾ ಪ್ರಾಧಿಕಾರದ ಅಧೀಕ್ಷಣೆಗೆ ಒಳಪಟ್ಟು ನಡೆಸತಕ್ಕದ್ದಾಗಿದೆ. ಮೇಲೆ ತಿಳಿಸಿದಂತೆ ಸಹಕಾರ ಸಂಘದ /ಸಹಕಾರಿಯ ಮಂಡಲಿ ಚುನಾವಣೆಗಳನ್ನು / ಪದಾಧಿಕಾರಿಗಳ ಚುನಾವಣೆಗಳನ್ನು ಸದರಿ ಅಧಿನಿಯಮ / ನಿಯಮಗಳು ಹಾಗೂ ಸಂಘಗಳ ಉಪವಿಧಿಗಳನ್ನು ಗಮನದಲ್ಲಿಟ್ಟುಕೊಂಡು ಕಾನೂನಿಗೆ ಅನುಗುಣವಾಗಿ ನಡೆಸತಕ್ಕದ್ದಾಗಿದೆ. 2015ರ ಮಾರ್ಚ್‌ಗೆ ಅವಧಿ ಮುಗಿಯಲಿರುವ ಫೆಡರಲ್ ಸಹಕಾರ ಸಂಘಗಳ / ಸಹಕಾರಿಗಳ ಮಂಡಲಿ ಚುನಾವಣೆಗಳು ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ಅಧಿನಿಯಮ ಪ್ರಕರಣ–39ಎ, ದ ಅವಕಾಶದಂತೆ ನಡೆಸುವ ಸಂಬಂಧ ಪ್ರಾಧಿಕಾರವು ಅಗತ್ಯ ಕ್ರಮ ಕೈಗೊಳ್ಳಬೇಕಾಗಿರುತ್ತದೆ. 2015ನೇ ಮಾರ್ಚ್ ಅಂತ್ಯಕ್ಕೆ ಮಂಡಲಿಯ ಅವಧಿ ಮುಕ್ತಾಯವಾಗುವ ಫೆಡರಲ್ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಮಂಡಲಿ ಸದಸ್ಯರ ಸಾಮಾನ್ಯ ಚುನಾವಣೆ ಮತ್ತು ತತ್ಪರಿಣಾಮ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸುವ ಬಗ್ಗೆ ಮತದಾರರ ಪಟ್ಟಿಯ ತಯಾರಿಕೆಗಾಗಿ ಮತ್ತು ಚುನಾವಣೆಗಳನ್ನು ನಡೆಸುವುದಕ್ಕಾಗಿ ಪೂರ್ವಸಿದ್ಧತಾ ಕಾರ್ಯವನ್ನು ಪ್ರಾರಂಭಿಸಬೇಕಾಗಿರುತ್ತದೆ. ಪ್ರತಿಯೊಂದು ಸಹಕಾರ ಸಂಘದ ಮಂಡಲಿಯು ತನ್ನ ಪದಾವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಹಿಂದಿನ ಕನಿಷ್ಟ ಆರು ತಿಂಗಳಿಗೆ ಮುಂಚೆ ಸಹಕಾರಿ ಚುನಾವಣಾ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದಾಗಿದೆ.

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು, 2013ರ ನಿಯಮ–13–ಡಿ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ–5–ಬಿ ದ ಅವಕಾಶದಂತೆ ಜಿಲ್ಲಾ ಚುನಾವಣಾಧಿಕಾರಿಯು ಕೂಲಂಕುಷ ಪರಿಶೀಲನೆಯ ನಂತರ, ಆಡಳಿತ ಮಂಡಲಿಗಳಿಗೆ ಪದಾವಧಿ ಮುಕ್ತಾಯವಾಗುವ 120 ದಿನಗಳ ಪೂರ್ವದಲ್ಲಿ;

(i) ಸಹಕಾರ ಸಂಘದ /ಸಹಕಾರಿಯ ಹೆಸರು ಮತ್ತು ವಿಳಾಸ;

(ii) ಮಂಡಲಿಗೆ ಆಯ್ಕೆಯಾಗಬೇಕಾಗಿರುವ ನಿರ್ದೇಶಕರ ಸಂಖ್ಯೆ;

(iii) ಆಡಳಿತ ಮಂಡಲಿ ಪದಾವಧಿ ಮುಕ್ತಾಯವಾಗುವ ದಿನಾಂಕ;

(iv) ಚುನಾವಣೆಗಳನ್ನು ನಡೆಸಬಹುದಾದ ಸ್ಥಳ ಹಾಗೂ ಚುನಾವಣಾ ಪ್ರಾಧಿಕಾರಕ್ಕೆ ಅವಶ್ಯವಿರುವ ಇತರೆ ಮಾಹಿತಿಗಳನ್ನು ಒಳಗೊಂಡ, ಚುನಾವಣೆಗಳು ಸನ್ನಿಹಿತವಾಗಿರುವ ಎಲ್ಲಾ ಸಹಕಾರ ಸಂಘಗಳ ಕ್ರೋಢೀಕೃತ ಪಟ್ಟಿಯನ್ನು ಕಳುಹಿಸತಕ್ಕದ್ದಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳನ್ನು ನೇಮಿಸುವ ಅಗತ್ಯವಿರುತ್ತದೆ.

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು 2013ರ ನಿಯಮ–2(ಐ-1) ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ನಿಯಮ–2(ಜಿ–2) ದ ಅವಕಾಶದಂತೆ ಜಿಲ್ಲಾ ಚುನಾವಣಾಧಿಕಾರಿಯನ್ನು ನೇಮಿಸುವ ಅಧಿಕಾರ /ಜವಾಬ್ದಾರಿಯು ಸಹಕಾರ ಚುನಾವಣಾ ಪ್ರಾಧಿಕಾರದ್ದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮೂರನೇ ಹಂತದಲ್ಲಿ ಫೆಡರಲ್ ಸಹಕಾರ ಸಂಘಗಳ /ಸಹಕಾರಿಗಳ ಮಂಡಲಿಗಳ ಸಾಮಾನ್ಯ ಚುನಾವಣೆ ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಯನ್ನು

ನಡೆಸುವ ಬಗ್ಗೆ ಜಿಲ್ಲಾ ಚುನಾವಣಾಧಿಕಾರಿಗಳನ್ನು ನೇಮಿಸುವ ಉದ್ದೇಶ ಹೊಂದಿದ್ದು ಈ ಸಂಬಂಧ ಕೆಳಕಂಡ ಆದೇಶ ಹೊರಡಿಸಲಾಗಿದೆ.

**-: ಆದೇಶ :-**

**ಸಚುಪ್ರಾ/ಚುನಾವಣೆ/ಜಿಚುಅ/ಫೆಡರಲ್/103/2014-15** **ದಿನಾಂಕ: 05.03.2015**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು 2013ರ ನಿಯಮ-2(ಐ-1) ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ನಿಯಮ-2(ಜಿ-2)ರ ಅವಕಾಶದಂತೆ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಎನ್.ಸಿ.ಮುನಿಯಪ್ಪ, ಕರ್ನಾಟಕ ರಾಜ್ಯದ ಸಹಕಾರ ಚುನಾವಣಾ ಆಯುಕ್ತನಾದ ನಾನು, ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ-1ರಲ್ಲಿನ ಸಂಘಗಳಲ್ಲದೆ ಕಾರ್ಯವ್ಯಾಪ್ತಿಯ ನಿಬಂಧಕರಿಂದ ಚುನಾವಣೆಗೆ ಬಾಕಿ ಇರುವ ಇನ್ನ್ಯಾವುದೇ ಸಂಘಗಳ / ಸಹಕಾರಿಗಳ ಹೆಸರು ಬಿಟ್ಟುಹೋಗಿದ್ದಲ್ಲಿ, ನಂತರ ಜಿಲ್ಲಾಚುನಾವಣಾಧಿಕಾರಿಗಳ ಗಮನಕ್ಕೆ ಬಂದಲ್ಲಿ, ಅವುಗಳನ್ನೂ ಸೇರಿಸಿಕೊಂಡು ಫೆಡರಲ್ ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಳಿಗೆ ಚುನಾವಣೆ ನಡೆಸುವುದಕ್ಕೆ ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳಿಗೆ ಸಂಬಂಧಿಸಿದಂತೆ ಆಯಾ ಜಿಲ್ಲೆಯ ಕಾರ್ಯವ್ಯಾಪ್ತಿಯಲ್ಲಿ ಇರುವ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ಆಯಾ ಜಿಲ್ಲೆಯ ಪೆಡರಲ್ ಸಹಕಾರ ಸಂಘ / ಸಹಕಾರಿಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಚುನಾವಣಾಧಿಕಾರಿಯನ್ನಾಗಿ ಮುಂದಿನ ಆದೇಶದವರೆಗೆ ನೇಮಿಸಿರುತ್ತೇನೆ. ಜಿಲ್ಲಾ ಚುನಾವಣಾಧಿಕಾರಿಗಳು, ಫೆಡರಲ್ ಸಹಕಾರ ಸಂಘಗಳ ಮುಖ್ಯ ಕಾರ್ಯನಿರ್ವಾಹಕರು ಸಲ್ಲಿಸಿದ ಮತದಾರರ ಪಟ್ಟಿಯನ್ನು ಸಂಬಂಧಿಸಿದ ದಾಖಲಾತಿಗಳೊಂದಿಗೆ ಪರಿಶೀಲಿಸಿ ಸಿದ್ದಪಡಿಸಲು ಹಾಗೂ ಮತನೀಡುವ ಹಕ್ಕುಳ್ಳ /ಸುಸ್ತಿದಾರರ ಹಾಗೂ ಸುಸ್ತಿಯಾಗುವವರ ಕರಡು ಪಟ್ಟಿಯನ್ನು ಚುನಾವಣಾ ದಿನಾಂಕಕ್ಕೆ ಕನಿಷ್ಠ 45 ದಿನಗಳ ಮುಂಚಿತವಾಗಿ ಪ್ರಕಟಿಸಿ, ಆಕ್ಷೇಪಣೆ ಕರೆಯುವುದು, ಅಂತಿಮ ಮತದಾರರ ಪಟ್ಟಿಯನ್ನು ಚುನಾವಣಾ ದಿನಾಂಕಕ್ಕೆ 15 ದಿನಗಳ ಪೂರ್ವದಲ್ಲಿ ಪ್ರಕಟಿಸುವುದರ ಕುರಿತು ಅಗತ್ಯ ಕ್ರಮವಿಡತಕ್ಕದ್ದು.

ಅಲ್ಲದೆ ಪ್ರತಿ ಸಹಕಾರ ಸಂಘದ ಮತನೀಡುವ ಹಕ್ಕುಳ್ಳ ಸದಸ್ಯರ ಮತ್ತು ಡೆಲಿಗೇಟ್‌ಗಳ ಕರಡು ಪಟ್ಟಿ, ಸುಸ್ತಿದಾರರ ಕರಡು ಪಟ್ಟಿ ಹಾಗೂ ಮತದಾನದ ಹಕ್ಕನ್ನು ಹೊಂದಿರದ ಇತರ ಸದಸ್ಯರ ಮತ್ತು ಡೆಲಿಗೇಟ್‌ಗಳ ಕರಡು ಪಟ್ಟಿಗಳನ್ನು ಹಾಗೂ ಮತದಾರರ ಅಂತಿಮ ಪಟ್ಟಿ ಮತ್ತು ಚುನಾವಣಾ ವೇಳಾಪಟ್ಟಿಗಳನ್ನು ಸಂಬಂಧಪಟ್ಟ ಸಹಕಾರ ಸಂಘದ ಮತ್ತು ಅದರ ಶಾಖೆಗಳ ಸೂಚನಾಫಲಕದಲ್ಲಿ, ಸಹಕಾರ ಇಲಾಖೆಯ ಸ್ಥಳೀಯ ಕಛೇರಿಯಲ್ಲಿ, ಸಹಕಾರ ಸಂಘದ ಜಾಲತಾಣದಲ್ಲಿ (ಇದ್ದಲ್ಲಿ) ಹಾಗೂ ಸಹಕಾರ ಸಂಘದ ಸದಸ್ಯರಿಗೆ ಮತ್ತು ಡೆಲಿಗೇಟ್‌ಗಳಿಗೆ ತಲುಪಲು ಅವಕಾಶವಿರುವಂತಹ ಇತರ ಸ್ಥಳಗಳಲ್ಲಿ ಪ್ರಕಟಿಸತಕ್ಕದ್ದು.

ಜಿಲ್ಲಾ ಚುನಾವಣಾಧಿಕಾರಿಗಳು ಸಹಾಯಕ ಚುನಾವಣಾಧಿಕಾರಿಗಳ ನೆರವಿನೊಂದಿಗೆ ಅನುಬಂಧ-1ರಲ್ಲಿನ ಫೆಡರಲ್ ಸಹಕಾರ ಸಂಘಗಳ / ಸಹಕಾರಿಗಳ ಚುನಾವಣೆಯನ್ನು ಮತ್ತು ತತ್ಪರಿಣಾಮದ ಪದಾದಿಕಾರಿಗಳ ಚುನಾವಣೆಯನ್ನು, ಅನುಬಂಧ-2ರಲ್ಲಿ ಸೂಚಿಸಿರುವ ನಿರ್ದೇಶನ ಮತ್ತು ಮಾರ್ಗಸೂಚಿಗಳನ್ನು ಅನುಸರಿಸಿ ನಡೆಸಲು ಆದೇಶಿಸಿದೆ.

(ಎನ್.ಸಿ. ಮುನಿಯಪ್ಪ)
ಆಯುಕ್ತರು
ಸಹಕಾರ ಚುನಾವಣಾ ಪ್ರಾಧಿಕಾರ
ಬೆಂಗಳೂರು.

ಗೆ,

ಜಿಲ್ಲಾಧಿಕಾರಿಗಳು,
---------------- ಜಿಲ್ಲೆ
---------------- ಹಾಗೂ
ಜಿಲ್ಲಾ ಚುನಾವಣಾಧಿಕಾರಿ (ಫೆಡರಲ್ ಸಂಘಗಳು)
---------------- ಜಿಲ್ಲೆ.

**ಪ್ರತಿಗಳನ್ನು ಈ ಕೆಳಕಂಡವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ :-**

1. ಮಾನ್ಯ ಸರ್ಕಾರದ ಕಾರ್ಯದರ್ಶಿ, ಸಹಕಾರ ಇಲಾಖೆ, 6ನೇ ಅಂತಸ್ತು, ಬಹುಮಹಡಿ ಕಟ್ಟಡ, ಬೆಂಗಳೂರು-560 001.
2. ಸಹಕಾರ ಸಂಘಗಳ ನಿಬಂಧಕರು, ನಂ.1 ಅಲಿ ಆಸ್ಕರ್ ರಸ್ತೆ, ಬೆಂಗಳೂರು-560052
3. ಸಹಕಾರ ಸಂಘಗಳ ಅಪರ ನಿಬಂಧಕರು, (ಪತ್ತು), (ಕೈಗಾರಿಕೆ ಮತ್ತು ಹೈನುಗಾರಿಕೆ), (ವಸತಿ ಮತ್ತು ಇತರೆ), (ಬಳಕೆ ಮತ್ತು ಮಾರಾಟ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು
4. ಸಹಕಾರ ಸಂಘಗಳ ಜಂಟಿ ನಿಬಂಧಕರು, (ಆಡಳಿತ ಮತ್ತು ಅಭಿವೃದ್ಧಿ), (ಪಟ್ಟಣ ಬ್ಯಾಂಕುಗಳು), (ಐಸಿಡಿಪಿ), (ಕಾನೂನುಕೋಶ), ಕೇಂದ್ರ ಕಛೇರಿ, ಬೆಂಗಳೂರು
5. ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ / ಬೆಳಗಾವಿ ಪ್ರಾಂತ / ಕಲಬುರ್ಗಿ ಪ್ರಾಂತ / ಮೈಸೂರು ಪ್ರಾಂತ.

**ಸಂಬಂಧಿಸಿದ ಈ ಕೆಳಕಂಡ ಫೆಡರಲ್ ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ:-**

1. ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ನಂ.6, ಲಕ್ಷ್ಮಿ ಸದನ, 5ನೇ ಮುಖ್ಯರಸ್ತೆ ಚಾಮರಾಜಪೇಟೆ, ಬೆಂಗಳೂರು-18.
2. ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತ, ಕೇರಾಫ್ ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಟಿಪ್ಪುಸುಲ್ತಾನ್ ಅರಮನೆ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18.
3. ಶಿವಮೊಗ್ಗ ಜಿಲ್ಲಾ ಸಹಕಾರ ಯೂನಿಯನ್ ನಿ., ವಿನೋಬನಗರ, 2ನೇ ಹಂತ, ಶಿವಮೊಗ್ಗ.
4. ಶಿವಮೊಗ್ಗ ಜಿಲ್ಲಾ ಸಹಕಾರ ಮಾರಾಟ ಒಕ್ಕೂಟ ನಿ., ಕೃಷಿ ಮಾರುಕಟ್ಟೆ ಆವರಣ, ಸಾಗರ ರಸ್ತೆ, ಶಿವಮೊಗ್ಗ.
5. ಚಿತ್ರದುರ್ಗ ಜಿಲ್ಲಾ ಸಹಕಾರ ಯೂನಿಯನ್ ನಿಯಮಿತ, ಸಿಡಿಸಿಸಿ ಬ್ಯಾಂಕ್ ಕಟ್ಟಡ, ಚಿತ್ರದುರ್ಗ.
6. ಕೊಡಗು ಜಿಲ್ಲಾ ಸಹಕಾರ ಯೂನಿಯನ್ ನಿ., ಪಿ.ಐ.ಬೆಳ್ಳಪ್ಪ ಸ್ಮಾರಕ ಸಹಕಾರ ಭವನ, ಪೆನ್‌ಷನ್ ಲೇನ್, ಮಡಿಕೇರಿ.
7. ತಾಲ್ಲೂಕು ಸಹಕಾರ ಒಕ್ಕೂಟ ನಿಯಮಿತ, ವೀರಾಜಪೇಟೆ.
8. ತಾಲ್ಲೂಕು ಸಹಕಾರ ಒಕ್ಕೂಟ ನಿಯಮಿತ, ಸೋಮವಾರಪೇಟೆ
9. ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ, ಪ್ರಧಾನ ಕಛೇರಿ, "ಉನ್ನತಿ" ಬಿ.ಎಂ.ರಸ್ತೆ, ಹಾಸನ.
10. ಮಂಡ್ಯ ಜಿಲ್ಲಾ ಸಹಕಾರ ಯೂನಿಯನ್ ನಿ., ನಂ.1156, 1ನೇ ತಿರುವು, ಅಶೋಕನಗರ, ಮಂಡ್ಯ.
11. ಮಂಡ್ಯ ಜಿಲ್ಲಾ ಸಹಕಾರ ಕೃಷಿ ಉತ್ಪನ್ನಗಳ ಮಾರಾಟ ಒಕ್ಕೂಟ ನಿಯಮಿತ, ಆರ್‌ಎಪಿಸಿಎಂಎಸ್ ರೈತಸಭಾಂಗಣ, ಬೆಂಗಳೂರು-ಮೈಸೂರು ರಸ್ತೆ, ಮಂಡ್ಯ.
12. ಮಂಡ್ಯ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತ, ಮಾರ್ಕೆಟ್ ರಸ್ತೆ, ಮಂಡ್ಯ.
13. ದಿ.ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಪ್ರಧಾನ ಕಛೇರಿ, ಕೇಂದ್ರ ಬಸ್‌ನಿಲ್ದಾಣದ ಹತ್ತಿರ, ಬೆಳಗಾವಿ.
14. ಜಿಲ್ಲಾ ಸಹಕಾರ ಯೂನಿಯನ್ ನಿಯಮಿತ, ಬಸ್‌ನಿಲ್ದಾಣದ ಎದುರುಗಡೆ, ವಿಜಾಪುರ.
15. ಕೆನರಾ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋಆಪರೇಟೀವ್ ಬ್ಯಾಂಕ್ ಲಿಮಿಟೆಡ್, ನ್ಯೂಮಾರ್ಕೆಟ್ ಯಾರ್ಡ್, ಶಿರಸಿ.
16. ಬಳ್ಳಾರಿ ಜಿಲ್ಲಾ ಸಹಕಾರ ಯೂನಿಯನ್ ನಿ., ನೆಹರೂ ಕಾಲೋನಿ, ಬಲ್ಡೋಟ ಪಾರ್ಕ್ ಎದುರುಗಡೆ, ಹೊಸಪೇಟೆ ಅಂಚೆ, ಹೊಸಪೇಟೆ.

17. ಬಳ್ಳಾರಿ ಜಿಲ್ಲಾ ಸಹಕಾರ ವ್ಯವಸಾಯ ಉತ್ಪನ್ನ ಮಾರಾಟ ಒಕ್ಕೂಟ ನಿಯಮಿತ, ಎಪಿಎಂಸಿ ಯಾರ್ಡ್, 1ನೇಬಾಗಿಲು, ಡ್ಯಾಂ ರಸ್ತೆ, ಹೊಸಪೇಟೆ.
18. ತಾಲ್ಲೂಕು ಇಂದಿರಾಗಾಂಧಿ ಸ್ವಸಹಾಯ ಸಂಘ ಹಾಗೂ ಸ್ತ್ರೀಶಕ್ತಿ ಗುಂಪುಗಳ ಸಹಕಾರ ಒಕ್ಕೂಟ ನಿ., ಸಿಂಧನೂರು, ರಾಯಚೂರು ಜಿಲ್ಲೆ.
19. ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿಯಮಿತ, ಬಾಗಲಕೋಟೆ.
20. ತುಮಕೂರು ಜಿಲ್ಲಾ ಸಹಕಾರ ಯೂನಿಯನ್ ನಿ., ಸಹಕಾರ ಭವನ, 9ನೇಮುಖ್ಯರಸ್ತೆ, ಕನಕಾಂಬರ, 2ನೇಅಡ್ಡರಸ್ತೆ, ಗೋಕುಲ ಬಡಾವಣೆ, ಕ್ಯಾತಸಂದ್ರ ಅಂಚೆ, ತುಮಕೂರು ಜಿಲ್ಲೆ.
21. ತುಮಕೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ, ಕೇಂದ್ರ ಕಛೇರಿ, ನಗರಪೊಲೀಸ್ ಠಾಣೆ ಪಕ್ಕ, ತುಮಕೂರು.
22. ಗುಲ್ಬರ್ಗಾ-ಯಾದಗಿರಿ ಜಿಲ್ಲಾ ಸಹಕಾರ ಯೂನಿಯನ್ ನಿ., ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋಆಪರೇಟೀವ್ ಮ್ಯಾನೇಜ್ ಮೆಂಟ್ ಕಟ್ಟಡ, ಆದರ್ಶನಗರ, ಸೇಡಂರಸ್ತೆ, ಕಲಬುರಗಿ.
23. ಗುಲ್ಬರ್ಗಾ-ಯಾದಗಿರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಡಿಸಿಸಿ ಬ್ಯಾಂಕ್, ಅಂಚೆಪೆಟ್ಟಿಗೆ ಸಂಖ್ಯೆ-4, ಮುಖ್ಯರಸ್ತೆ, ಜಗತ್, ಕಲಬುರ್ಗಿ.
24. ಕಾರ್ಕಳ ತಾಲ್ಲೂಕು ಸ್ಥಳೀಯ ಸಹಕಾರಿ ಒಕ್ಕೂಟ ನಿಯಮಿತ, ಕಾರ್ಕಳ ವೃತ್ತ, ಕಾರ್ಕಳ.
25. ಕುಂದಾಪುರ ತಾಲ್ಲೂಕು ಸ್ಥಳೀಯ ಸಹಕಾರಿ ಯೂನಿಯನ್ ನಿಯಮಿತ, ಯಡಿಯಾಳ ಕಾಂಪೌಂಡ್, ಕುಂದಾಪುರ.
26. ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತ, ಚಾಮರಾಜ ಜೋಡಿ ರಸ್ತೆ, ಸುವರ್ಣ ಸಹಕಾರ ಸೌಧ, ಮೈಸೂರು.
27. ಚಿಕ್ಕಮಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ರತ್ನಗಿರಿ ರಸ್ತೆ, ಚಿಕ್ಕಮಗಳೂರು.
28. ಕಛೇರಿ ಆದೇಶ /ರಕ್ಷಾ ಕಡತ.

ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರುರವರ ಆದೇಶ
ಸಂಖ್ಯೆ:ಸಚುಪ್ರಾ/ಚುನಾವಣೆ/ಜಿಚುಅ/ಫೆಡರಲ್/103/2014-15 ದಿನಾಂಕ: 05.03.2015ಕ್ಕೆ

## ಅನುಬಂಧ-I

| ಕ್ರ ಸಂ | ಜಿಲ್ಲಾ ಚುನಾವಣಾಧಿ ಕಾರಿಗಳನ್ನು ನೇಮಿಸಬೇಕಾದ ಜಿಲ್ಲೆಯ ಹೆಸರು (ಫೆಡರಲ್ ಸಂಘಗಳು / ಸಹಕಾರಿಗಳು) | ಜಿಲ್ಲಾ ಚುನಾವಣಾಧಿಕಾರಿಯಾಗಿ ನೇಮಕ ಮಾಡಲಾದ ಅಧಿಕಾರಿಗಳ ಹುದ್ದೆ / ಪದನಾಮ. | ಚುನಾವಣೆ ನಡೆಸಬೇಕಾಗಿರುವ ಫೆಡರಲ್ ಸಹಕಾರ ಸಂಘಗಳ ಹೆಸರು ಮತ್ತು ವಿಳಾಸ. |
|---|---|---|---|
| 1 | ಬೆಂಗಳೂರು ನಗರ ಜಿಲ್ಲೆ | ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ. | ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ನಂ.6, ಲಕ್ಷ್ಮಿ ಸದನ, 5ನೇ ಮುಖ್ಯರಸ್ತೆ ಚಾಮರಾಜಪೇಟೆ, ಬೆಂಗಳೂರು-18. |
| 2 | ಬೆಂಗಳೂರು ಗ್ರಾಮಾಂತರ ಜಿಲ್ಲೆ | ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ. | ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತ, ಕೇರಾಫ್ ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಟಿಪ್ಪುಸುಲ್ತಾನ್ ಅರಮನೆ ರಸ್ತೆ, ಚಾಮರಾಜಪೇಟೆ, ಬೆಂಗಳೂರು. |
| 3 | ಶಿವಮೊಗ್ಗ ಜಿಲ್ಲೆ | ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ. | 01. ಶಿವಮೊಗ್ಗ ಜಿಲ್ಲಾ ಸಹಕಾರ ಯೂನಿಯನ್ ನಿ., ವಿನೋಬನಗರ, 2ನೇ ಹಂತ, ಶಿವಮೊಗ್ಗ.<br>02. ಶಿವಮೊಗ್ಗ ಜಿಲ್ಲಾ ಸಹಕಾರ ಮಾರಾಟ ಒಕ್ಕೂಟ ನಿ., ಕೃಷಿ ಮಾರುಕಟ್ಟೆ ಆವರಣ, ಸಾಗರ ರಸ್ತೆ, ಶಿವಮೊಗ್ಗ. |
| 4 | ಚಿತ್ರದುರ್ಗ ಜಿಲ್ಲೆ | ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ. | ಚಿತ್ರದುರ್ಗ ಜಿಲ್ಲಾ ಸಹಕಾರ ಯೂನಿಯನ್ ನಿಯಮಿತ, ಸಿಡಿಸಿಸಿ ಬ್ಯಾಂಕ್ ಕಟ್ಟಡ, ಚಿತ್ರದುರ್ಗ. |
| 5 | ಕೊಡಗು ಜಿಲ್ಲೆ | ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಕೊಡಗು ಜಿಲ್ಲೆ. | 01. ಕೊಡಗು ಜಿಲ್ಲಾ ಸಹಕಾರ ಯೂನಿಯನ್ ನಿ., ಪಿ.ಐ.ಬೆಳ್ಳಪ್ಪ ಸ್ಮಾರಕ ಸಹಕಾರ ಭವನ, ಪೆನ್‌ಷನ್ ಲೇನ್, ಮಡಿಕೇರಿ.<br>02. ತಾಲ್ಲೂಕು ಸಹಕಾರ ಒಕ್ಕೂಟ ನಿಯಮಿತ, ವೀರಾಜಪೇಟೆ.<br>03. ತಾಲ್ಲೂಕು ಸಹಕಾರ ಒಕ್ಕೂಟ ನಿಯಮಿತ, ಸೋಮವಾರಪೇಟೆ |
| 6 | ಹಾಸನ ಜಿಲ್ಲೆ | ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಹಾಸನ ಜಿಲ್ಲೆ. | ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ, ಪ್ರಧಾನ ಕಛೇರಿ, "ಉನ್ನತಿ" ಬಿ.ಎಂ.ರಸ್ತೆ, ಹಾಸನ. |
| 7 | ಮಂಡ್ಯ ಜಿಲ್ಲೆ | ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಮಂಡ್ಯ ಜಿಲ್ಲೆ. | 01. ಮಂಡ್ಯ ಜಿಲ್ಲಾ ಸಹಕಾರ ಯೂನಿಯನ್ ನಿ., ನಂ.1156, 1ನೇ ತಿರುವು, ಅಶೋಕನಗರ, ಮಂಡ್ಯ.<br>02. ಮಂಡ್ಯ ಜಿಲ್ಲಾ ಸಹಕಾರ ಕೃಷಿ ಉತ್ಪನ್ನಗಳ ಮಾರಾಟ ಒಕ್ಕೂಟ ನಿಯಮಿತ, ಆರ್‌ಎಪಿಸಿಎಂಎಸ್ ರೈತಸಭಾಂಗಣ, ಬೆಂಗಳೂರು-ಮೈಸೂರು ರಸ್ತೆ, ಮಂಡ್ಯ.<br>03. ಮಂಡ್ಯ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತ, ಮಾರ್ಕೆಟ್ ರಸ್ತೆ, ಮಂಡ್ಯ. |

| | | | |
|---|---|---|---|
| 8 | ಬೆಳಗಾವಿ ಜಿಲ್ಲೆ | ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಬೆಳಗಾವಿ ಜಿಲ್ಲೆ. | ದಿ.ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಪ್ರಧಾನ ಕಛೇರಿ, ಕೇಂದ್ರ ಬಸ್‌ನಿಲ್ದಾಣದ ಹತ್ತಿರ, ಬೆಳಗಾವಿ. |
| 9 | ವಿಜಾಪುರ ಜಿಲ್ಲೆ | ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ವಿಜಾಪುರ ಜಿಲ್ಲೆ. | ಜಿಲ್ಲಾ ಸಹಕಾರ ಯೂನಿಯನ್ ನಿಯಮಿತ, ಬಸ್‌ನಿಲ್ದಾಣದ ಎದುರುಗಡೆ, ವಿಜಾಪುರ. |
| 10 | ಉತ್ತರ ಕನ್ನಡ ಜಿಲ್ಲೆ | ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಉತ್ತರಕನ್ನಡ ಜಿಲ್ಲೆ. | ಕೆನರಾ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋಆಪರೇಟೀವ್ ಬ್ಯಾಂಕ್ ಲಿಮಿಟೆಡ್, ನ್ಯೂಮಾರ್ಕೆಟ್ ಯಾರ್ಡ್, ಶಿರಸಿ. |
| 11 | ಬಳ್ಳಾರಿ ಜಿಲ್ಲೆ | ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ಜಿಲ್ಲೆ. | 01. ಬಳ್ಳಾರಿ ಜಿಲ್ಲಾ ಸಹಕಾರ ಯೂನಿಯನ್ ನಿ., ನೆಹರೂ ಕಾಲೋನಿ, ಬಲ್ಡೋಟ ಪಾರ್ಕ್ ಎದುರುಗಡೆ, ಹೊಸಪೇಟೆ ಅಂಚೆ, ಹೊಸಪೇಟೆ.<br>02. ಬಳ್ಳಾರಿ ಜಿಲ್ಲಾ ಸಹಕಾರ ವ್ಯವಸಾಯ ಉತ್ಪನ್ನ ಮಾರಾಟ ಒಕ್ಕೂಟ ನಿಯಮಿತ, ಎಪಿಎಂಸಿ ಯಾರ್ಡ್, 1ನೇಬಾಗಿಲು, ಡ್ಯಾಂ ರಸ್ತೆ, ಹೊಸಪೇಟೆ. |
| 12 | ರಾಯಚೂರು ಜಿಲ್ಲೆ | ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ರಾಯಚೂರು ಜಿಲ್ಲೆ. | ತಾಲ್ಲೂಕು ಇಂದಿರಾಗಾಂಧಿ ಸ್ವಸಹಾಯ ಸಂಘ ಹಾಗೂ ಸ್ತ್ರೀಶಕ್ತಿ ಗುಂಪುಗಳ ಸಹಕಾರ ಒಕ್ಕೂಟ ನಿ., ಸಿಂಧನೂರು, ರಾಯಚೂರು ಜಿಲ್ಲೆ. |
| 13 | ಬಾಗಲಕೋಟೆ ಜಿಲ್ಲೆ | ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ. | ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿಯಮಿತ, ಬಾಗಲಕೋಟೆ. |
| 14 | ತುಮಕೂರು ಜಿಲ್ಲೆ | ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ತುಮಕೂರು ಜಿಲ್ಲೆ. | 01. ತುಮಕೂರು ಜಿಲ್ಲಾ ಸಹಕಾರ ಯೂನಿಯನ್ ನಿ., ಸಹಕಾರ ಭವನ, 9ನೇಮುಖ್ಯರಸ್ತೆ, ಕನಕಾಂಬರ, 2ನೇಅಡ್ಡರಸ್ತೆ, ಗೋಕುಲ ಬಡಾವಣೆ, ಕ್ಯಾತಸಂದ್ರ ಅಂಚೆ, ತುಮಕೂರು ಜಿಲ್ಲೆ.<br>02. ತುಮಕೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ, ಕೇಂದ್ರ ಕಛೇರಿ, ನಗರಪೊಲೀಸ್ ಠಾಣೆ ಪಕ್ಕ, ತುಮಕೂರು. |
| 15 | ಕಲಬುರ್ಗಿ ಜಿಲ್ಲೆ | ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಕಲಬುರ್ಗಿ ಜಿಲ್ಲೆ. | 01. ಗುಲ್ಬರ್ಗಾ-ಯಾದಗಿರಿ ಜಿಲ್ಲಾ ಸಹಕಾರ ಯೂನಿಯನ್ ನಿ., ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋಆಪರೇಟೀವ್ ಮ್ಯಾನೇಜ್ ಮೆಂಟ್ ಕಟ್ಟಡ, ಆದರ್ಶನಗರ, ಸೇಡಂರಸ್ತೆ, ಕಲಬುರಗಿ.<br>02. ಗುಲ್ಬರ್ಗಾ-ಯಾದಗಿರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಡಿಸಿಸಿ ಬ್ಯಾಂಕ್, ಅಂಚೆಪೆಟ್ಟಿಗೆ ಸಂಖ್ಯೆ : 4, ಮುಖ್ಯರಸ್ತೆ, ಜಗತ್, ಕಲಬುರಗಿ. |
| 16 | ಉಡುಪಿ ಜಿಲ್ಲೆ | ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಉಡುಪಿ ಜಿಲ್ಲೆ. | 01. ಕಾರ್ಕಳ ತಾಲ್ಲೂಕು ಸ್ಥಳೀಯ ಸಹಕಾರಿ ಒಕ್ಕೂಟ ನಿಯಮಿತ, ಕಾರ್ಕಳ ವೃತ್ತ, ಕಾರ್ಕಳ.<br>02. ಕುಂದಾಪುರ ತಾಲ್ಲೂಕು ಸ್ಥಳೀಯ ಸಹಕಾರಿ ಯೂನಿಯನ್ ನಿಯಮಿತ, ಯಡಿಯಾಳ ಕಾಂಪೌಂಡ್, ಕುಂದಾಪುರ. |

| | | | |
|---|---|---|---|
| 17 | ಮೈಸೂರು ಜಿಲ್ಲೆ | ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಮೈಸೂರು ಜಿಲ್ಲೆ. | ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತ, ಚಾಮರಾಜ ಜೋಡಿ ರಸ್ತೆ, ಸುವರ್ಣ ಸಹಕಾರ ಸೌಧ, ಮೈಸೂರು. |
| 18 | ಚಿಕ್ಕಮಗಳೂರು ಜಿಲ್ಲೆ | ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ. | ಚಿಕ್ಕಮಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ರತ್ನಗಿರಿ ರಸ್ತೆ, ಚಿಕ್ಕಮಗಳೂರು. |

(ಎನ್.ಸಿ.ಮುನಿಯಪ್ಪ)
ಆಯುಕ್ತರು.
ಸಹಕಾರ ಚುನಾವಣಾ ಪ್ರಾಧಿಕಾರ
ಕರ್ನಾಟಕ ರಾಜ್ಯ, ಬೆಂಗಳೂರು

<u>ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ರವರ ಆದೇಶ</u>

<u>ಸಂಖ್ಯೆ: ಸಚುಪ್ರಾ/ಚುನಾವಣೆ/ಜಿಚುಅ/ಫೆಡರಲ್/103/2014-15 ದಿನಾಂಕ: 05.03.2015ಕ್ಕೆ</u>

## ಅನುಬಂಧ-II

1. ಫೆಡರಲ್ ಸಹಕಾರ ಸಂಘಗಳ ಮಂಡಲಿಗಳ ಸಾಮಾನ್ಯ ಚುನಾವಣೆಯನ್ನು ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960, ಹಾಗೂ ಮಾಧ್ಯಮಿಕ ಸಂಘಗಳ ನೋಂದಾಯಿತ ಉಪವಿಧಿಗಳನ್ವಯ ಹಾಗೂ ಸಹಕಾರ ಚುನಾವಣಾ ಪ್ರಾಧಿಕಾರದ ನಿರ್ದೇಶನ / ಮಾರ್ಗಸೂಚಿಗಳನ್ವಯ ನಡೆಸುವ ಬಗ್ಗೆ ಜಿಲ್ಲಾ ಚುನಾವಣಾಧಿಕಾರಿಗಳು ಅಗತ್ಯ ಕ್ರಮವಿಡತಕ್ಕದ್ದಾಗಿರುತ್ತದೆ.

2. ಸಹಕಾರ ಚುನಾವಣಾ ಪ್ರಾಧಿಕಾರವು ಚುನಾವಣೆಗಳನ್ನು /ಪದಾಧಿಕಾರಿಗಳ ಚುನಾವಣೆಯನ್ನು ನಡೆಸುವ ಸಂಬಂಧವಾಗಿ ಈಗಾಗಲೇ ಹಲವಾರು / ಅಧಿಸೂಚನೆ / ಆದೇಶ ಮತ್ತು ಸುತ್ತೋಲೆಗಳನ್ನು ಹೊರಡಿಸಿದ್ದು ಈಗಾಗಲೇ ಪತ್ರ ಮುಖೇನಾ/ ಇ-ಮೇಲ್ ಮೂಲಕ ಎಲ್ಲಾ ಅಧಿಕಾರಿಗಳಿಗೂ ಕಳುಹಿಸಲಾಗಿದೆ ಪ್ರಾಧಿಕಾರದ ವೆಬ್‌ಸೈಟ್ ಗಮನಿಸುವುದರಿಂದ ಇದನ್ನು ಪಡೆಯಬಹುದಾಗಿದೆ.

3. ಪ್ರಾಧಿಕಾರವು ಫೆಡರಲ್ ಸಹಕಾರ ಸಂಘಗಳ ಮಂಡಲಿ ಚುನಾವಣೆಗಳನ್ನು ನಡೆಸುವ ಸಂಬಂಧ ಚೆಕ್‌ಲಿಸ್ಟ್‌ನಲ್ಲಿ ವಿವರಿಸಿರುವಂತೆ ಕ್ರಮವಿಡತಕ್ಕದ್ದು.

4. ಸದಸ್ಯರ ಮತದ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ-20, ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960, ಹಾಗೂ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಹಾಗೂ ಸಂಘದ ಉಪವಿಧಿಗಳನ್ನು ಗಮನಿಸತಕ್ಕದ್ದಾಗಿದೆ.

5. ಸಹಕಾರ ಸಂಘದ ಸದಸ್ಯತ್ವ /ಮತದಾನದ ಹಕ್ಕು ಸಾಧಿಸುವ ಸಂಬಂಧ ಯಾವುದೇ ನ್ಯಾಯಾಲಯದಲ್ಲಿ ವಿವಾದ /ವ್ಯಾಜ್ಯಗಳಿದ್ದು, ನ್ಯಾಯಾಲಯದಿಂದ ಯಾವುದೇ ಮಧ್ಯಂತರ ಆದೇಶಗಳಿದ್ದಲ್ಲಿ ಆ ಬಗ್ಗೆ ಗಮನಿಸಿ ಅಗತ್ಯ ಕ್ರಮವಿಡುವುದು ವಿವಾದಗಳು ಇತ್ಯರ್ಥವಾಗಿದ್ದಲ್ಲಿ ನ್ಯಾಯಾಲಯದ ಆದೇಶದಂತೆ ಸಂಬಂಧಿಸಿದ ಸಂಘವು ಅಗತ್ಯ ಕ್ರಮವಿಟ್ಟಿರುವ ಬಗ್ಗೆ ಗಮನಿಸುವುದು.

6. ಚುನಾವಣೆಗಳಿಗಾಗಿ ಮತದಾರರ ಪಟ್ಟಿಗಳನ್ನು ತಯಾರಿಸುವುದಕ್ಕಾಗಿ ಮತ್ತು ಚುನಾವಣೆಗಳನ್ನು ನಡೆಸುವುದಕ್ಕಾಗಿ ತಗಲುವ ವೆಚ್ಚವನ್ನು ಸಂಬಂಧಿಸಿದ ಸಂಘಗಳು ಭರಿಸತಕ್ಕದ್ದಾಗಿದೆ. [ಅಧಿನಿಯಮ ಪ್ರಕರಣ-39ಎಎ(14)] ಮತ್ತು ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ-5-ಎಎಫ್]

7. ಮತದಾರರ ಪಟ್ಟಿಯನ್ನು ಜಿಲ್ಲಾ ಚುನಾವಣಾಧಿಕಾರಿಯು ಸಿದ್ಧಪಡಿಸುವ ಸಂಬಂಧ ಸರಿಯಾದ ಮಾಹಿತಿ / ದಾಖಲೆಯನ್ನು ಒದಗಿಸುವ ಜವಾಬ್ದಾರಿ ಸಂಬಂಧಿಸಿದ ಸಹಕಾರ ಸಂಘಗಳ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯದ್ದಾಗಿರುತ್ತದೆ. [ಅಧಿನಿಯಮ ಪ್ರಕರಣ-39ಎಎ(15)] [ನಿಯಮ 13-ಡಿ(4)]

8. ಸಹಕಾರ ಸಂಘದ ಮತದಾನದ ಹಕ್ಕುಳ್ಳ ಮತದಾರರ / ಡೆಲಿಗೇಟ್‌ಗಳ ಕರಡು ಪಟ್ಟಿ, ಸುಸ್ತಿದಾರರ ಕರಡು ಪಟ್ಟಿ , ಮತದಾನಕ್ಕೆ ಅರ್ಹತೆ ಹೊಂದಿರದ ಇತರೆ ಸದಸ್ಯರ ಪಟ್ಟಿ (ಕಾರಣಗಳನ್ನು ನಮೂದಿಸಿ) ಹಾಗೂ ಸುಸ್ತಿಯಾಗುವವರ ಕರಡು ಪಟ್ಟಿಯನ್ನು ಸಿದ್ಧಪಡಿಸುವ ಜವಾಬ್ದಾರಿ ಪ್ರತಿ ಸಂಘದ /ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನದ್ದಾಗಿರುತ್ತದೆ. ಈ ರೀತಿಯ ಪಟ್ಟಿಗಳನ್ನು ಚುನಾವಣಾ ದಿನಾಂಕಕ್ಕೆ ಕನಿಷ್ಠ 60 ದಿವಸಗಳು ಮುಂಚಿತವಾಗಿ ಜಿಲ್ಲಾ ಚುನಾವಣಾಧಿಕಾರಿಗಳಿಗೆ ದಾಖಲಾತಿಗಳ ಸಹಿತ ಸಲ್ಲಿಸಬೇಕಾಗಿರುತ್ತದೆ. ಜಿಲ್ಲಾ ಚುನಾವಣಾಧಿಕಾರಿಯು ಸಂಬಂಧಿಸಿದ ಸಂಘಗಳು/ ಸಹಕಾರಿಗಳು ಸಲ್ಲಿಸುವ ಮೇಲ್ಕಂಡ ಪಟ್ಟಿಗಳನ್ನು ನಿಯಮಾನುಸಾರ ಅರ್ಹಮತದಾರರ ಪಟ್ಟಿ ಪರಿಶೀಲಿಸಿ ಸಿದ್ಧಪಡಿಸುವುದು ಮತ್ತು ಅಧಿನಿಯಮ /ನಿಯಮಗಳನ್ವಯ ಅಗತ್ಯ ಕ್ರಮವಿಡಬೇಕಾಗಿರುತ್ತದೆ. ಈ ಸಂಬಂಧ ಜಿಲ್ಲಾ ಚುನಾವಣಾಧಿಕಾರಿಯು ಅವರಿಗೆ ನೆರವಾಗಲು ಮತ್ತು ಮತದಾರರ ಪಟ್ಟಿಯನ್ನು ನಿಯಮಾನುಸಾರ ಪರಿಶೀಲಿಸಲು ಆ ಪ್ರಕಾರ ಸರಿಯಾದ ಅರ್ಹ ಮತದಾರರ ಪಟ್ಟಿ ತಯಾರಿಸಲು ಮೇಲ್ವಿಚಾರಣ ತಂಡವನ್ನು ರಚಿಸಬಹುದಾಗಿದೆ.

9. ಪ್ರತಿಯೊಂದು ಫೆಡರಲ್ ಸಹಕಾರ ಸಂಘದ / ಸಹಕಾರಿಯ ಮಂಡಲಿಯೂ ಸಹಕಾರ ಚುನಾವಣಾ ಪ್ರಾಧಿಕಾರವು ಸುಗಮವಾಗಿ ಮತದಾರರ ಪಟ್ಟಿಗಳನ್ನು ತಯಾರಿಸುವುದಕ್ಕೆ ಮತ್ತು ಚುನಾವಣೆಗಳನ್ನು ನಡೆಸುವುದಕ್ಕೆ ಅವಶ್ಯಕವಾದ ಎಲ್ಲಾ ನೆರವು, ಸಹಾಯ ಮತ್ತು ಸಹಕಾರವನ್ನು ನೀಡಬೇಕಾಗಿರುತ್ತದೆ.

10. ಮತದಾರರ ಪಟ್ಟಿಯನ್ನು ಸಂಘದ ಬೈಲಾದಲ್ಲಿರುವಂತೆ ಮತದಾರರ ಪ್ರತ್ಯೇಕ ಕ್ಷೇತ್ರಗಳಿದ್ದಲ್ಲಿ ಕ್ಷೇತ್ರವಾರು ಸಿದ್ದಪಡಿಸಬೇಕಾಗಿರುತ್ತದೆ. ಮತದಾರರ ಪಟ್ಟಿಯಲ್ಲಿ ಸದಸ್ಯರ ಹೆಸರು / ಸದಸ್ಯರ ತಂದೆ /ತಾಯಿ ಹೆಸರು ಅಥವಾ ಪತಿಯ ಹೆಸರು, ವಿಳಾಸ, ಸದಸ್ಯತ್ವ /ಪ್ರವೇಶತ್ವ ಸಂಖ್ಯೆ, ಗುರುತಿನ ಕಾರ್ಡ್ ನೀಡಿದ್ದಲ್ಲಿ ಅದರ ಸಂಖ್ಯೆಯನ್ನು ತಪ್ಪದೇ ನಮೂದಿಸಬೇಕಾಗಿರುತ್ತದೆ.

11. ಅಂತಿಮ ಮತದಾರರ ಪಟ್ಟಿಯು ಫೆಡರಲ್ ಸಹಕಾರ ಸಂಘದ/ಸಹಕಾರಿಯ ಸಂಬಂಧದಲ್ಲಿ ಮತದಾನದ ಹಕ್ಕುಳ್ಳ ಮತ್ತು ಮತದಾನ ಮಾಡಲು ಅರ್ಹತೆ ಹೊಂದಿದ ಸದಸ್ಯ ಸಂಘಗಳ ಡೆಲಿಗೇಟ್‌ನ ವಿವರಗಳನ್ನುಳ್ಳ ಪಟ್ಟಿಯಾಗಿರುತ್ತದೆ. ಪ್ರತಿ ಸಹಕಾರ ಸಂಘವು ಅಂಥ ಮತದಾರರ ಪಟ್ಟಿಯ ಪ್ರತಿಯನ್ನು ಸಂಘದ ಕಛೇರಿಯಲ್ಲಿ ಮತ್ತು ಜಿಲ್ಲಾ ಚುನಾವಣಾಧಿಕಾರಿಗಳ ಕಛೇರಿಯಲ್ಲಿ ಪ್ರಕಟಿಸಿ ವೀಕ್ಷಣೆಗೆ ಮುಕ್ತಾಯವಾಗಿಟ್ಟಿರತಕ್ಕದ್ದು.

12. ಸಹಕಾರ ಸಂಘಗಳ ಆಡಳಿತ ಮಂಡಳಿಗೆ /ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆಯನ್ನು ನಡೆಸುವ ಸಂಬಂಧ ಜಿಲ್ಲಾ ಚುನಾವಣಾಧಿಕಾರಿಯು ಕಾನೂನಿಗೆ ಅನುಗುಣವಾಗಿ ಸಹಕಾರ ಚುನಾವಣಾ ಪ್ರಾಧಿಕಾರದ ಪರವಾಗಿ ಕಾರ್ಯನಿರ್ವಹಿಸುವ ಸಂಬಂಧ ಆಗಾಗ್ಗೆ ಪ್ರಾಧಿಕಾರವು ನೀಡುವ ಮಾರ್ಗಸೂಚಿಗಳನ್ನು ತಪ್ಪದೇ ಪಾಲಿಸಲು ಸೂಚಿಸಿದೆ.

13. ಜಿಲ್ಲಾ ಚುನಾವಣಾಧಿಕಾರಿಗಳು ಅಧಿನಿಯಮ / ನಿಯಮಗಳನ್ವಯ ಕೈಗೊಳ್ಳುವ ಕ್ರಮಗಳು ಮುಕ್ತ ಹಾಗೂ ಪಾರದರ್ಶಕತೆಯನ್ನು ಹೊಂದಿರಬೇಕಾಗಿದ್ದು ಮಾಹಿತಿ ಹಕ್ಕು ಅಧಿನಿಯಮದಡಿ ಯಾವುದೇ ಅರ್ಜಿದಾರರಿಗೆ, ಸದರಿ ಅಧಿಕಾರಿಗಳು ಹೊರಡಿಸುವ ಆದೇಶ /ಅಧಿಸೂಚನೆ / ಪತ್ರ ವ್ಯವಹಾರದ ಪ್ರತಿಯನ್ನು ಸದರಿ ಅಧಿನಿಯಮದಡಿ ನೀಡಬೇಕಾಗಿರುತ್ತದೆ ಈ ಹಿನ್ನೆಲೆಯಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳು ಹೆಚ್ಚಿನ ಎಚ್ಚರ ವಹಿಸಿ ಕಾನೂನಿನಗನುಗುಣವಾಗಿ ಪಾರದರ್ಶಕವಾಗಿ ಚುನಾವಣೆ ನಡೆಸಲು ಅಗತ್ಯ ಕ್ರಮವಿಡತಕ್ಕದ್ದು.

(ಎನ್.ಸಿ. ಮುನಿಯಪ್ಪ)
ಆಯುಕ್ತರು
ಸಹಕಾರ ಚುನಾವಣಾ ಪ್ರಾಧಿಕಾರ
ಬೆಂಗಳೂರು.

## ದಿನಾಂಕ:31.3.2015ರ ಅಂತ್ಯಕ್ಕೆ ಅವಧಿ ಮುಗಿಯಲಿರುವ ಫೆಡರಲ್ (Federal Societies) ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಲಿಗೆ ಸಾಮಾನ್ಯ ಚುನಾವಣೆ ನಡೆಸುವಿಕೆ – ಹಂತ ಹಂತವಾಗಿ ನಿಯಮಾನುಸಾರ ಜಿಲ್ಲಾ ಚುನಾವಣಾಧಿಕಾರಿಯು ಕ್ರಮವಿಡುವ ಬಗ್ಗೆ ಚೆಕ್‌ಲಿಸ್ಟ್

## ಚೆಕ್‌ಲಿಸ್ಟ್

ಉಲ್ಲೇಖ:– ಪ್ರಾಧಿಕಾರದ ಅಧಿಸೂಚನೆ ಸಂಖ್ಯೆ : ಸಚುಪ್ರಾ/ಆಡಳಿತ/ಚುನಾವಣೆ/103/2014–15 ದಿನಾಂಕ : 05.03.2015

| ಕ್ರಸಂ | ವಿವರ | ಷರಾ |
|---|---|---|
| 1 | ಫೆಡರಲ್ ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆಗಳನ್ನು ನಡೆಸುವ ಸಂಬಂಧ ಚುನಾವಣಾ ದಿನಾಂಕಗಳನ್ನು ನಿಗಧಿಪಡಿಸಿರುವುದು (ದಿನಾಂಕ: 05.03.2015ರ ಪ್ರಾಧಿಕಾರದ ಅಧಿಸೂಚನೆಯಂತೆ) | |
| | **(ಎ) ಸಹಕಾರಿ ಹಾಲು ಒಕ್ಕೂಟಗಳು ಹಾಗೂ ಒಂದೇ ವಿಧದ ಸಹಕಾರ ಸಂಘಗಳು / ಸಹಕಾರಿಗಳು ಸದಸ್ಯರಾಗಿರುವ ಯಾವುದೇ ಒಕ್ಕೂಟಗಳು.** | **ದಿನಾಂಕ: 12.05.2015 ಮತ್ತು 13.05.2015, ಈ ದಿನಾಂಕಗಳ ಪೈಕಿ ಜಿಲ್ಲಾ ಚುನಾವಣಾಧಿಕಾರಿಗೆ ಸೂಕ್ತವೆನಿಸುವ ಯಾವುದೇ ದಿನಾಂಕದಂದು ಚುನಾವಣೆ ನಿಗಧಿಪಡಿಸತಕ್ಕದ್ದು.** |
| | **(ಬಿ) ಜಿಲ್ಲಾ ಸಹಕಾರಿ ಯೂನಿಯನ್‌ಗಳು, ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ಗಳು, ಜಿಲ್ಲಾ ಮಾರಾಟ ಒಕ್ಕೂಟ, ಜಿಲ್ಲಾ ಸಹಕಾರ ವ್ಯವಸಾಯೋತ್ಪನ್ನ ಮಾರಾಟ ಒಕ್ಕೂಟ ಹಾಗೂ ಇತರೆ ಫೆಡರಲ್ ಸಂಘಗಳು / ಸಹಕಾರಿಗಳು.** | **ದಿನಾಂಕ : 30.05.2015 ಮತ್ತು 31.05.2015, ಈ ದಿನಾಂಕಗಳ ಪೈಕಿ ಜಿಲ್ಲಾ ಚುನಾವಣಾಧಿಕಾರಿಗೆ ಸೂಕ್ತವೆನಿಸುವ ಯಾವುದೇ ದಿನಾಂಕದಂದು ಚುನಾವಣೆ ನಿಗಧಿಪಡಿಸತಕ್ಕದ್ದು.** |
| 2 | ಮತ ನೀಡುವ ಹಕ್ಕುಳ್ಳ ಸದಸ್ಯರ ಕರಡು ಪಟ್ಟಿ, ಸುಸ್ತಿದಾರರ ಕರಡು ಪಟ್ಟಿ, ಮತದಾನದ ಹಕ್ಕನ್ನು ಹೊಂದಿರದ ಇತರ ಸದಸ್ಯರ ಅಥವಾ ಪ್ರತಿನಿಧಿಗಳ ಮತ್ತು ಡೆಲಿಗೇಟ್‌ಗಳ ಕರಡುಪಟ್ಟಿಯನ್ನು ದಾಖಲಾತಿಗಳ ಸಹಿತ ಸಂಬಂಧಿಸಿದ ಮಾಧ್ಯಮಿಕ ಸಹಕಾರ ಸಂಘದ ಮುಖ್ಯಕಾರ್ಯನಿರ್ವಾಹಕರು ಜಿಲ್ಲಾ ಚುನಾವಣಾಧಿಕಾರಿಗೆ ಚುನಾವಣಾ ದಿನಾಂಕದ ಪೂರ್ವದ ಕನಿಷ್ಟ 60 ದಿನಗಳ ಮುಂಚಿತವಾಗಿ ಸಲ್ಲಿಸುವಿಕೆ ಬಗ್ಗೆ. [ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ನಿಯಮ 13ಡಿ ಮತ್ತು ಸೌಹಾರ್ದ ಸಹಕಾರಿ ನಿಯಮ–5–ಬಿ ರಂತೆ] | ಚುನಾವಣಾ ದಿನಾಂಕಕ್ಕೆ ಪೂರ್ವದ ಕನಿಷ್ಟ 60 ದಿನಗಳ ಮುಂಚೆ ಜಿಲ್ಲಾ ಚುನಾವಣಾಧಿಕಾರಿಗೆ ಸಂಘದ ಮುಖ್ಯ ಕಾರ್ಯನಿರ್ವಾಹಕನು ನಿಯಮಾನುಸಾರ ಸಲ್ಲಿಸಬೇಕಾಗಿರುತ್ತದೆ. |

| | | |
|---|---|---|
| 3 | ಮೇಲೆ ನಮೂದಿಸಲಾದ ಕಂಡಿಕೆ (2) ರಲ್ಲಿ ವಿವರಿಸಿರುವಂತೆ ಕರಡು ಮತದಾರರ ಮತ್ತು ಡೆಲಿಗೇಟ್‌ಗಳ ಪಟ್ಟಿ, ಸುಸ್ತಿದಾರರ ಕರಡು ಪಟ್ಟಿ ಹಾಗೂ ಅಂತಿಮ ಮತದಾರರ ಪಟ್ಟಿಯ ಪ್ರಕಟಣೆಗೆ ನಿಗಧಿಪಡಿಸಿದ ದಿನಾಂಕದ ಪೂರ್ವದಲ್ಲಿ ಮರುಪಾವತಿಗೆ ಬಾಕಿಯಾಗುವ ಸದಸ್ಯರ ಕರಡು ಪಟ್ಟಿಗಳನ್ನು, ಮತದಾನದ ಹಕ್ಕನ್ನು ಹೊಂದಿರದ ಇತರ ಸದಸ್ಯರ ಮತ್ತು ಡೆಲಿಗೇಟ್‌ಗಳ ಪಟ್ಟಿಯ ಸಂಬಂಧ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಲ್ಲಿಸಲು ಚುನಾವಣಾ ದಿನಾಂಕಕ್ಕೆ ಪೂರ್ವದ ಕನಿಷ್ಟ 45 ದಿನಗಳ ಮುಂಚಿತವಾಗಿ ಜಿಲ್ಲಾ ಚುನಾವಣಾಧಿಕಾರಿಯು (ಡಿ.ಇ.ಓ) ಪ್ರಕಟಿಸ ಬೇಕಾಗಿರುತ್ತದೆ.<br><br>[ಕರ್ನಾಟಕ ಸಹಕಾರ ಸಂಘಗಳ ನಿಯಮ 13ಡಿ ಮತ್ತು ಸೌಹಾರ್ದ ನಿಯಮ-5(ಬಿ)ಗಳನ್ವಯ] | ಚುನಾವಣೆ ದಿನಾಂಕಕ್ಕೆ ಪೂರ್ವದ ಕನಿಷ್ಟ 45 ದಿನಗಳ ಮುಂಚೆ ಪ್ರಕಟಿಸತಕ್ಕದ್ದು. |
| 4 | ಅಂತಿಮ ಅರ್ಹ ಮತದಾರರ ಪಟ್ಟಿಯನ್ನು ಚುನಾವಣಾ ದಿನಾಂಕಕ್ಕೆ ಪೂರ್ವದ 15ನೇ ದಿನದಂದು ಅಥವಾ ಮುಂಚಿತವಾಗಿ ಪ್ರಕಟಿಸುವುದು. [ ಕರ್ನಾಟಕ ಸಹಕಾರ ಸಂಘಗಳ ನಿಯಮ 13ಡಿ ಮತ್ತು ಸೌಹಾರ್ದ ಸಹಕಾರಿ ನಿಯಮ 5ಬಿರಂತೆ] ಅಂತಿಮ ಮತದಾರರ ಪಟ್ಟಿಯು ಮಾಧ್ಯಮಿಕ ಸಹಕಾರ ಸಂಘದ ಸಂಬಂಧದಲ್ಲಿ, ಮತದಾನದ ಹಕ್ಕುಳ್ಳ ಎಲ್ಲಾ ಬಿಡಿ ಸದಸ್ಯರು ಮತ್ತು ಸದಸ್ಯ ಸಂಘಗಳ ಡೆಲಿಗೇಟ್‌ಗಳ ವಿವರಗಳನ್ನು ಒಳಗೊಂಡಿರತಕ್ಕದ್ದು. | ಚುನಾವಣಾ ದಿನಾಂಕಕ್ಕೆ ಪೂರ್ವದ 15ನೇ ದಿನದಂದು ಅಥವಾ ಮುಂಚಿತವಾಗಿ ಪ್ರಕಟಿಸತಕ್ಕದ್ದು. |
| 5 | ಸಹಕಾರ ಚುನಾವಣಾ ಪ್ರಾಧಿಕಾರವು ಮಾಧ್ಯಮಿಕ ಸಹಕಾರ ಸಂಘಗಳಿಗೆ ಚುನಾವಣೆ ನಡೆಸಲು ನಿಗಧಿಪಡಿಸಿರುವ ಅಧಿಸೂಚನೆಯಂತೆ, ನಿಯಮ 14ರಂತೆ ಜಿಲ್ಲಾ ಚುನಾವಣಾಧಿಕಾರಿಯು ನಮೂನೆ XI ಮತ್ತು ಸೌಹಾರ್ದ ಸಹಕಾರಿ ನಿಯಮ-5-ಇ ರಂತೆ ನಮೂನೆ-1-ಎ ರಲ್ಲಿ ಅಧಿಸೂಚನೆ ಹೊರಡಿಸುವ ಬಗ್ಗೆ ಕ್ರಮ. | ಜಿಲ್ಲಾ ಚುನಾವಣಾಧಿಕಾರಿಯು ಕರ್ನಾಟಕ ಸಹಕಾರ ಸಂಘಗಳ ನಿಯಮ 14 ಮತ್ತು ಸೌಹಾರ್ದ ಸಹಕಾರಿ ನಿಯಮ 5-ಇ ರನ್ವಯ ಸಾಮಾನ್ಯ ಚುನಾವಣಾ ಅಧಿಸೂಚನೆಯನ್ನು ಹೊರಡಿಸತಕ್ಕದ್ದು. |
| 6 | ಕಂಡಿಕೆ 5 ರಲ್ಲಿ ವಿವರಿಸಿದಂತೆ ಜಿಲ್ಲಾ ಚುನಾವಣಾಧಿಕಾರಿಯು ಅಧಿಸೂಚನೆ ಹೊರಡಿಸಿದ ನಂತರ ಉದ್ದೇಶಿತ ಚುನಾವಣೆಗಾಗಿ ರಿಟರ್ನಿಂಗ್ ಅಧಿಕಾರಿ ನಮೂನೆ XII ಮತ್ತು ನಮೂನೆ-2-ಎ ರಲ್ಲಿ ಸಾರ್ವಜನಿಕ ನೋಟೀಸ್ ನೀಡುವಿಕೆ. | ನಿಯಮ 14 (3) ಮತ್ತು ಸೌಹಾರ್ದ ಸಹಕಾರಿ ನಿಯಮ 5-ಇ(3)ರಂತೆ ರಿಟರ್ನಿಂಗ್ ಅಧಿಕಾರಿಯು ಅಗತ್ಯ ಕ್ರಮವಿಡುವ ಬಗ್ಗೆ ನಿರ್ದೇಶಿಸುವುದು. |
| 7 | ಆಕಸ್ಮಿಕ ತೆರವಾದ ನಿರ್ದೇಶಕರ /ಪದಾಧಿಕಾರಿಗಳ ಚುನಾವಣೆ. | ಇಂತಹ ಪ್ರಕರಣಗಳಿದ್ದಲ್ಲಿ ಪರಿಶೀಲಿಸಿ ರಿಟರ್ನಿಂಗ್ ಆಫೀಸರ್ ನೇಮಕಾತಿಗೆ ಅಗತ್ಯ ಕ್ರಮ ಕೈಗೊಂಡು ಪ್ರಾಧಿಕಾರಕ್ಕೆ ವರದಿ ಸಲ್ಲಿಸುವುದು. |
| 8 | ಮತದಾನ ಕೇಂದ್ರಗಳನ್ನು ಗುರುತಿಸುವಿಕೆ ಮತ್ತು ಅದರ ವಿವರಗಳು | ರಿಟರ್ನಿಂಗ್ ಅಧಿಕಾರಿಯು, ಡಿ.ಇ.ಓ ರವರೊಡನೆ ಸಮಾಲೋಚಿಸಿ ಸೂಕ್ತವಾದ ಮತದಾನ ಕೇಂದ್ರಗಳನ್ನು ಸ್ಥಾಪಿಸಲು ವ್ಯವಸ್ಥೆ ಮಾಡುವುದು. |

| | | |
|---|---|---|
| 9 | ಮತದಾನ ಸಿಬ್ಬಂದಿ ನೇಮಕಾತಿ | ಕರ್ನಾಟಕ ಸಹಕಾರ ಸಂಘಗಳ ನಿಯಮ 13(ಎಫ್) ಮತ್ತು ಸೌಹಾರ್ದ ಸಹಕಾರಿ ನಿಯಮ 2004ರ ನಿಯಮ–5–ಡಿ ರ ಅವಕಾಶದಂತೆ ಜಿಲ್ಲಾ ಚುನಾವಣಾಧಿಕಾರಿಯು ಪ್ರತಿಯೊಂದು ಮತದಾನ ಕೇಂದ್ರಕ್ಕಾಗಿ ಒಬ್ಬ ಅಧ್ಯಕ್ಷಾಧಿಕಾರಿಯನ್ನು ಮತ್ತು ತಾನು ಅವಶ್ಯವೆಂದು ಭಾವಿಸುವಂಥ ಮತದಾನ ಅಧಿಕಾರಿ ಅಥವಾ ಪೋಲಿಂಗ್ ಅಧಿಕಾರಿಗಳನ್ನು ನೇಮಕ ಮಾಡಬಹುದು. |
| 10 | ಚುನಾವಣೆ ನಡೆಸುವ ಸಂಬಂಧ ಅಧಿಕಾರಿ / ಚುನಾವಣಾ ಸಿಬ್ಬಂದಿಗಳಿಗೆ ತರಬೇತಿ ವ್ಯವಸ್ಥೆ | ಪ್ರಾಧಿಕಾರವು ಈಗಾಗಲೇ ಚುನಾವಣಾ ಕೈಪಿಡಿಯನ್ನು ಒದಗಿಸಿದೆ. ಅಧಿನಿಯಮ / ನಿಯಮಗಳು /ಬೈಲಾ ಅವಕಾಶಗಳ ಸಂಬಂಧ ಸಿಬ್ಬಂದಿಗೆ ಸೂಕ್ತ ತಿಳುವಳಿಕೆ ನೀಡಲು ತರಬೇತಿಗೆ ಅಗತ್ಯ ವ್ಯವಸ್ಥೆ ಮಾಡುವುದು. |
| 11 | ಚುನಾವಣಾ ಫಲಿತಾಂಶ ಘೋಷಣೆ ಮತ್ತು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ರಿಟರ್ನ್‌ಗಳನ್ನು ಸಲ್ಲಿಸುವುದು. | ನಿಯಮ 14ವೈ(2) ಮತ್ತು ನಿಯಮ–5–ಎಡಿ ರನ್ವಯ ರಿಟರ್ನಿಂಗ್ ಅಧಿಕಾರಿ ಕ್ರಮವಿಡುವ ಕುರಿತು ಸೂಚಿಸುವುದು. |
| 12 | ಮತಪೆಟ್ಟಿಗೆಗಳ ಮತ್ತು ಚುನಾವಣೆಗೆ ಸಂಬಂಧಪಟ್ಟ ಕಾಗದಪತ್ರಗಳ ಅಭಿರಕ್ಷೆ, ಪರಿವೀಕ್ಷಣೆ ಮತ್ತು ಹಾಜರುಪಡಿಸುವಿಕೆ, ಹಾಗೂ ವಿಲೇವಾರಿ | ನಿಯಮ 14ಎಬಿ ಯಿಂದ 14ಎಡಿ ವರೆಗೆ ಹಾಗೂ ನಿಯಮ 5–ಎಜಿ ಯಿಂದ 5–ಎಐ ಗಳ ಅವಕಾಶದಂತೆ ಹಾಗೂ ಸಹಕಾರ ಚುನಾವಣಾ ಪ್ರಾಧಿಕಾರವು ನಿರ್ದೇಶಿಸಿರುವಂತೆ ಕ್ರಮವಿಡುವಂತೆ ನೋಡಿಕೊಳ್ಳುವುದು. |
| 13 | ಪದಾಧಿಕಾರಿಗಳ ಚುನಾವಣೆ | ನಿಯಮ ಕರ್ನಾಟಕ ಸಹಕಾರ ಸಂಘಗಳ ನಿಯಮ 14ಎಜಿ ಮತ್ತು ಸೌಹಾರ್ದ ಸಹಕಾರಿ ನಿಯಮ 2004ರ ನಿಯಮ–6ರ ಅವಕಾಶದಂತೆ ಕ್ರಮವಿಡುವುದು. |
| 14 | ಮಾದರಿ ನೀತಿ ಸಂಹಿತೆ | ಪ್ರಾಧಿಕಾರದಿಂದ ಈಗಾಗಲೇ ಹೊರಡಿಸಿರುವ ಪತ್ರ ಸಂಖ್ಯೆ : ಸಚುಅ/17/ನೀತಿಸಂಹಿತೆ/2013–14 ದಿನಾಂಕ : 03–08–2013ರ ರೀತ್ಯಾ ಕ್ರಮವಿಡುವುದು. |

**(ಎನ್.ಸಿ. ಮುನಿಯಪ್ಪ)**
**ಆಯುಕ್ತರು,**
**ಸಹಕಾರ ಚುನಾವಣಾ ಪ್ರಾಧಿಕಾರ,**
**ಬೆಂಗಳೂರು.**